

## ನಕ್ಕುಬಿಡಿ

### ಲಾಯರ್ ವಾದ

ನ್ಯಾಯಾಧೀಶರು: ನೀವು ಆ ಹೆಂಗಸನ್ನು ನಿಮ್ಮ ಮನೆ ಗೇಟಿನ ಬಳಿ ನಿಂತು ನೋಡಿ ಮುವ್ವತ್ತೆರಡೂ ಹಲ್ಲುಗಳನ್ನು ಬಿಟ್ಟು ನಕ್ಕಿದ್ದೀರೆಂದೂ, ಇದರಿಂದ ನಿಮ್ಮ ಪತ್ನಿಗೆ ಮಾನಸಿಕವಾಗಿ ಬಹಳ ಹಿಂಸೆಯಾಗಿದೆಯೆಂದೂ ದೂರು ಬಂದಿದೆ.

ಆರೋಪಿ: ಇಲ್ಲ, ನಾನು ಆ ರೀತಿ ಯಾವ ನಡವಳಿಕೆಯನ್ನೂ ಮಾಡಿಲ್ಲ. ಬೇಕಾದರೆ ನನ್ನ ಲಾಯರ್ ಕೇಳಬಹುದು.

ವಕೀಲ: ಯುವರ್ ಆನರ್... ಈ ಘಟನೆ ನಡೆದಾಗ ನಾನು ಈ ಊರಿನಲ್ಲಿ ಇರಲಿಲ್ಲ, ಆದರೂ ಆರೋಪಿಯ ಪತ್ನಿ ಸುಖಾಸುಮ್ಮನೆ ಕೇಸ್ ಹಾಕಿದ್ದಾರೆ. ಎಂದು ಖಡಾಖಂಡಿತವಾಗಿ ಹೇಳಬಲ್ಲೆ.

ನ್ಯಾಯಾಧೀಶರು: ಹೇಗೆ ವಿವರಿಸಿ ಹೇಳಿ?

ವಕೀಲ: ಯುವರ್ ಆನರ್... ಈ ಕೊರೊನಾ ಬಂದಾಗಿನಿಂದಲೂ ಡಾಕ್ಟರ್ ಸಲಹೆಯಂತೆ ನನ್ನ ಕ್ಲೈಂಟ್ ಮನೆಯೊಳಗೆ ಹಲ್ಲು ಉಜ್ಜುವಾಗ ಮತ್ತು ಊಟದ ಸಮಯ ಬಿಟ್ಟು ಮಿಕ್ಕೆಲ್ಲ ಸಮಯದಲ್ಲೂ ಫೇಸ್ ಮಾಸ್ಕ್ ಧರಿಸುತ್ತಲೇ ಇದ್ದಾರೆ. ಹೀಗಿರುವಾಗ ಅವರು ಹೊರಗೆ ಗೇಟಿನ ಬಳಿ ನಿಂತು ಮುವ್ವತ್ತೆರಡು ಹಲ್ಲುಗಳನ್ನು ತೋರಿಸಿ ನಕ್ಕಿದ್ದಾರೆಂದರೆ ಹಲ್ಲುಗಳು ಕಾಣಲು ಹೇಗೆ ತಾನೇ ಸಾಧ್ಯ?

### ಏನೋ ರುಚಿ

(ಫೋನ್ ಸಂಭಾಷಣೆಯಲ್ಲಿ)

ಮಧು: ರೀಮಾ, ನೀವು ಮೊನ್ನೆ ಹೊಸರುಚಿಯ ಸ್ಪರ್ಧೆಯಲ್ಲಿ ಬಹುಮಾನ ಗೆದ್ದಿದೀರಲ್ಲ, ವಿಶೇಷವಾಗಿ ಏನು ಹಾಕಿದ್ರಿ? ಅದನ್ನು ನಾನೂ ಮಾಡಿದೆ. ಯಾಕೋ ಚೆನ್ನಾಗಿ ಬರಲಿಲ್ಲ.

ರೀಮಾ: ಅದೇ ಈನೋ ಗುಟ್ಟು.

ಮಧು: ಏನೂ, ಸರಿಯಾಗಿ ಕೇಳಲಿಲ್ಲ. ನನಗೆ ಸ್ವಲ್ಪ ಕಿವಿ ಸಮಸ್ಯೆ ಇದೆ. ಇರ್ಲಿ ಬಿಡಿ ಪರವಾಗಿಲ್ಲ. ನಂಗೆ ಲೇಟ್ ಆಯಿತು.

ಮರುದಿನ ಮಧು ಗಂಡನಿಗೆ ಹೊಸರುಚಿ ಮಾಡಿ ಬಡಿಸಿದಾಗ ಅವನಿಗೆ ಸಿಕ್ಕಾಪಟ್ಟೆ ಕೋಪ ಬಂತು.

ಗಂಡ: ಏನು ಅಡುಗೆ ಮಾಡಿದ್ದೀಯಾ? ಸರಿಯಾಗಿ ಕೇಳಿ ಮಾಡುವುದಲ್ವಾ?'

ಮಧು: ಕೇಳಿದೆರೀ, ಏನೋ ಹಾಕಿದ್ದೆ ಅಂದ್ರು. ಅವರು ಹೇಳದಿದ್ರೆ ಅಷ್ಟೇ ಹೋಯ್ತು ಅಂತ ನಾನೇ ಊಹೆ ಮಾಡಿ ನಂಗೆ ತಿಳಿದ ರೀತಿ ಮಾಡಿದೆ. ತಾಳಿ, ಅವರದೇ ಮೆಸೇಜ್ ಬಂತು. ಓ! ಅವರು ಹೊಸರುಚಿಗೆ 'ಈನೋ' ಹಾಕಿದ್ದರಂತೆ. ನಾನು ಏನೋ ಅಂದುಕೊಂಡು ಏನೇನೋ ಹಾಕಿದೆ.

(ಸಂಗ್ರಹ)
ಸುಮನಾ



'ಮೂರು ಸಲ ಕೂಗಿದ ಮೇಲೆ ಕುಕ್ಕರ್ ಆಫ್ ಮಾಡಿಬಿಡಿ' ಎಂದಿದ್ದಳು ಅವಳು. ಕುಕ್ಕರ್ ಮೂರಲ್ಲ, ಐದು ಸಲ ಕೂಗಿದರೂ ಅವನು ಆರಿಸಲಿಲ್ಲ.

ಹೆಂಡತಿ: ಯಾಕ್ರೀ ಐದು ಸಲ ಕೂಗಿದರೂ ಸುಮ್ಮನೆ ಇದ್ದೀರಾ?

ಗಂಡ: ನನಗೆ ಕನ್‌ಫ್ಯೂಸ್ ಆಯಿತು... ಕುಕ್ಕರ್ ಕೂಗಿದ ಮೇಲೋ ಅಥವಾ ನೀನು ಮೂರು ಸಲ ಕೂಗಿದ ಮೇಲೋ ಅಂತ. ಹಾಗಾಗಿ...

ಭೀಮಣ್ಣ: ಮದುವೆ ಆದ ನಂತರ ಮನೆಯಲ್ಲಿ ನಿನ್ನ ಜವಾಬ್ದಾರಿ ಜಾಸ್ತಿ ಆಯಿತಲ್ಲವೇ?

ಶಾಮಣ್ಣ: ಹೌದು. ಮದುವೆಗೆ ಮೊದಲು ಒಬ್ಬನಿಗೇ ಅಡುಗೆ ಮಾಡಿಕೊಳ್ಳುತ್ತಿದ್ದೆ. ಈಗ ಅದರ ಎರಡರಷ್ಟು ಮಾಡಬೇಕಾಗಿದೆ.

***

ಭಕ್ತ: ಮನುಷ್ಯನಿಗೆ ಅತ್ಯಂತ ಅವಶ್ಯಕವಾದದ್ದು ಏನು ಎಂದು ಕೇಳಬಹುದೇ ದಾಸರೇ ?

ದಾಸರು: ಆನೆ

ಭಕ್ತ: ಏನು? ಎಲ್ಲ ಬಿಟ್ಟು ಆನೆಯನ್ನು ಕಟ್ಟಿಕೊಂಡು ಅದನ್ನು ಸಾಕಲು ಸಾಧ್ಯವೇ ದಾಸರೇ?

ದಾಸರು: ಆನೆ ಎಂದರೆ ಏನೆಂದು ತಿಳಿದೆ? ಹೇಳುತ್ತೇನೆ ಕೇಳು, 'ಆ' ಎಂದರೆ ಆಯಸ್ಸು 'ನೆ' ಎಂದರೆ ನೆಮ್ಮದಿ!

***

ಸೀನ: ಶ್ಯಾಮು, ನಿನ್ನ ಮಗಳಿಗೆ ಸೈಟು ವಗೈರೆ ಆಸ್ತಿ ಮಾಡಿಟ್ಟಿದ್ದೀಯಾ ತಾನೇ?

ಶ್ಯಾಮು: ಹೂಂ, ಎರಡು ಸೈಟುಗಳು ಅವಳ ಹೆಸರಿನಲ್ಲೇ ಇವೆ. ಒಂದು ವೆಬ್ ಸೈಟು, ಇನ್ನೊಂದು ಶಾರ್ಟ್ ಸೈಟು!

***

ಶ್ಯಾಮು: ನಾನು ನನ್ನ ಹೆಂಡತಿಯನ್ನು ತುಂಬಾ ಪ್ರೀತಿಸುತ್ತೇನೆ, ನೀನು?

ಭೀಮು: ಅವಳು ನಿನ್ನ ಹೆಂಡತಿ, ನಾನು ಹೇಗೆ ಬೇರೊಬ್ಬರ ಹೆಂಡ್ತೀನ ಪ್ರೀತಿಸೋಕಾಗುತ್ತೆ?

(ಸಂಗ್ರಹ) ಎ.ಕೆ. ಪಟ್ಟಾಭಿ, ಬೆಂಗಳೂರು

